"ನಾನು ಹತ್ತು ಸಾವಿರ ನೋಡೇನಿ" ಎಂದೆ ಪುಳಕದಿಂದ.

"ಹಾಂ, ಹಾಂ, ನೋಡ್ವೇ. ಚಲೋ ಕಲ್ತು ದೊಡ್ಡ ನೌಕರಿ ಹಿಡದ್ರೆ ಸಿಗೂದು ನಿಂಗೆ ಅಷ್ಟು."

"ಅಲ್ಲಾ, ಇಲ್ಲೇ ನೋಡೇನಿ."

ಅಡುಗೆಮನೆಯಿಂದ ಸುಗಂಧಿ ಮಾಮಿ ಪಡಸಾಲೆಗೆ ಧಡಧಡ ನಡೆದು ಬಂದಂತೆ ಸದ್ದಾಯಿತು.

"ಹ್ಯಾಂ, ಇಲ್ಲ್ಯೇ ನೋಡ್ಯೇನಿ" ಎಂದು ನನ್ನ ಹುಬ್ಬಳ್ಳಿಯ ಭಾಷೆಯೊತ್ತನ್ನು ಅಣುಕಿಸಿದಳು ಅಜ್ಜಿ.

"ಹೆಂಗೆ ನೋಡ್ವ್ಯೇ? ನಿಮ್ಮಪ್ಪ ಅಮ್ಮ ಇಬ್ಬರದೂ ಸೇರೀನೇ ಐದು ಸಾವ್ರ ಇದ್ರೆ ಹೆಚ್ಚು..."

ನಾನು ಒಂದೇ ಉಸಿರಿನಲ್ಲಿ ಮೆಹು ಮಾಮಿಯ ಹೊಲಿಗೆ ಮಷಿನ್ನಿನ ಡ್ರಾಯರಿನಲ್ಲಿ ನೋಟಿನ ಕಟ್ಟು ಕಂಡಿದ್ದನ್ನು ಉಸುರಿಬಿಟ್ಟೆ. ಅಜ್ಜಿ ಒಂದು ಗಳಿಗೆ ಸುಮ್ಮನಾಗಿ, "ನೀನೆಂತಕ್ಕೆ ಹೋಗಿದ್ಯೆ ಆ ಕ್ವಾಣೆಗೆ? ಅಲ್ಲಿ ಹೋಗಿ ಬಂದು ಇಲ್ಲೆಲ್ಲಾ ಮುಟ್–ಕಿಟ್ ಮಾಡಬ್ಯಾಡಾ ಅಂದ್ ಹೇಳ್ಯಾಗಿದೆ ನಿಂಗೆ?" ಎಂದು ತುಸು ದೂರ ಸರಿದು ಕೂತಳು.

ಅನಂತರ ಅಂಗಳದಲ್ಲಿ ಬಂದ ಮೈನಾ ಹಕ್ಕಿಯ ದೆಸೆಯಿಂದ ಆ ಸಂಗತಿ ನನಗೆ ಮೆರೆತೇ ಹೋಯಿತು.

ಮುಂಜಾನೆ ನಾನು ಏಳುವ ಮೊದಲೇ ಹೊರಕೋಣೆಯಲ್ಲಿ ರಾಣಾರಂಪವೇರ್ಪಟ್ಟಿತ್ತು. ಒಳಗಿನಿಂದ ನಾನು ಮುಖವನ್ನೂ ತೋಳೆಯದೇ ಗೋಡೆಯ ಮರೆಯಿಂದ ಒಂದೇ ಕಣ್ಣನ್ನು ಹೊರಗೆ ನೆಟ್ಟು ನಿರುಕಿಸಿದೆ. ಎಂದೂ ಒಳಗೆ ಬರದ ಮೆಹು ಮಾಮಿ ಆರಾಮಕುರ್ಚಿಯ ಪಕ್ಕದಲ್ಲಿ ನೆಲಕ್ಕೆ ಮಂಡಿಯೂರಿ ಕುಳಿತಿದ್ದಳು. ಕುಳಿತರೆ ಅವಳ ಉದ್ದ ಕೂದಲು ನೆಲ ತಾಕುತ್ತಿದ್ದದು ನನ್ನ ಗಮನಕ್ಕೆ ಬಂತು.

ಸೆರಗು ಹೊದ್ದು ತಲೆ ತಗ್ಗಿಸಿ ಕುಳಿತಿದ್ದ ಅವಳ ಅನತಿ ದೂರದಲ್ಲಿ ಅಜ್ಜಿ, ಮಾಂಸದ ಮುಂದೆ ನಿಂತ ಹಸಿದ ಪ್ರಾಣಿಯಂತೆ ಕಣ್ಣು ಬಾಯಿಗಳನ್ನು ದೊಡ್ಡದಾಗಿ ಬಿಟ್ಟುಕೊಂಡು ನಿಂತಿದ್ದಳು. ಇವರಿಬ್ಬರನ್ನೂ ತ್ರಿಕೋನಾಕೃತಿಯಲ್ಲಿ ಸೇರಿಸುವಂತೆ ಅಶೋಕ ಮಾಮಾ ಒಂದು ಹೆಜ್ಜೆ ಮುಂದಿಟ್ಟು ಮೆಹು ಮಾಮಿಯೆಡೆಗೆ ಚೂರೇ ಬೆನ್ನು ಬಾಗಿಸಿ ನಿಂತಿದ್ದ. ಮನೆಯ ಉಡುಪಾದ ನೀಲಿ ಚೌಕಳಿಯ ಲುಂಗಿ ಮತ್ತು ಬಿಳಿ ಬನಿಯನ್ನಿನ ಮೇಲಿದ್ದ. ಅಚ್ಚರಿಯಾಗುವಂತೆ ಅವನ ಕೈಯಲ್ಲಿ ನಿನ್ನೆ ನಾನು ಡ್ರಾಯರಿನಲ್ಲಿ ಕಂಡ ಆ ನೋಟಿನ ಕಂತೆಯಿತ್ತು. ಈ ತ್ರಿಕೋನಕ್ಕೆ ಸೇರದ ಇನ್ನೊಂದು ಬಿಂದುವಿನಂತೆ ಸುಗಂಧಿ ಮಾಮಿ ಒಂದು ಮೂಲೆಯಲ್ಲಿ ಕೆಂಪು ಕಣ್ಣುಗಳಲ್ಲಿ ನಿಂತಿದ್ದಳು.

ಆ ದೃಶ್ಯವನ್ನು ನೋಡಿದರೆ ಈ ವಿಚಾರಣೆ ಬಹಳ ಸಮಯದಿಂದ ನಡೆಯುತ್ತಿರುವಂತೆ ಕಾಣುತ್ತಿತ್ತು. ಎಲ್ಲವೂ ಹೇಳಿ ಮುಗಿದರೂ ಇನ್ನೊಮ್ಮೆ ಮೊದಲಿನಿಂದ ಶುರು ಮಾಡುವವರಂತೆ ನನ್ನ ಮುಂದೆ ಆ ದೃಶ್ಯ ಬಿಚ್ಚಿಕೊಳ್ಳತೊಡಗಿತು.

"ನೀನು ಹೇಳೋತಂಕಾ ನಾನು ಬಿಡೋನಲ್ಲ. ಆಫೀಸಿಗೆ ರಜೆ ಹಾಕ್ವೆ ಬೇಕಾದ್ರೆ" ಎನ್ನುತ್ತ ಅಶೋಕ ಮಾಮಾ ಹಣದ ಕಟ್ಟನ್ನು ಮುಂದೆ ಮುಂದೆ ಮಾಡುತ್ತಿದ್ದ.

"ಗತಿಯಿಲ್ಲದವ್ಳು ಅಂದಿ ಮನೆಗೆ ಹೊಕ್ಕಿಸಿಕೊಂಡದ್ದು ಅಷ್ಟೇ. ನಮ್ ಚಂದೂ ಮುಖಾನೇ ಕಣ್ಮುಂದೆ ಬಂದು ಸುಮ್ಮನಿದ್ದದ್ದಾಗಿತ್ತು" ಎಂದು ಅಜ್ಜಿ ಇನ್ನಷ್ಟು ರೊಳರೊಳ ಅಂದಳು.

"ಒಂದೆರಡ್ ಸಾವ್ರ ಆಗಿದ್ರೆ ಸುಮ್ಮನಿರ್ತಿದೆ. ಏನೋ ಆಪತ್ಕಾಲದ್ದು ಅಂದಿ. ನಾನೇ ಇಷ್ಟ್ ದುಡ್ಡು ಕಾಣ್ಲಾ ಎಂದೂ. ಏನೂ ಅಡ್ಡ ದಂಧೆ ಮಾಡದೇ ಹೆಂಗ್ ಬರೂದೇ ನಿನ್ನ ಕೂಡೆ?"

ದಂಧೆ ಎಂಬ ಶಬ್ದ ಮೆಹು ಮಾಮಿಯನ್ನು ನಖಶಿಕಾಂತ ನಡುಗಿಸಿದ್ದು ಸ್ಪಷ್ಟವಿತ್ತು.

"ಅಯ್ಯೋ, ಭಾವನೋರೇ ಅಂಥ ಮಾತಾಡಬ್ಯಾಡ್ರೀ ಭಾವನೋರೇ. ಅದೂ... ಅದೂ..."

"ಮತ್ತೆಂಥದೇ? ನನ್ ಮಗಾ ಬದುಕಿದ್ದಿದ್ರೆ ಸುಮ್ಮನಿರ್ತಿದ್ದ? ಹೆಂಗಸರ ಕೂಡೆ ಹೆಂಗೆ ಬರೂದೇ ಇಷ್ಟ್ ದುಡ್ಡು?"